ಅ) ಐ.ಎ.ಎಸ್. – 123
ಐ.ಪಿ.ಎಸ್ – 58
ಕೆ.ಎ.ಎಸ್ – 379

ಇ) ಐ.ಎ.ಎಸ್ ಮತ್ತು ಐ. ಪಿ. ಎಸ್ ಅಧಿಕಾರಿಗಳಿಗೆ ಅಖಿಲ ಭಾರತ ಸೇವಾ ನಿಯಮಗಳನ್ವಯ ಲಭ್ಯವಾಗುವ ಎಲ್ಲಾ ಸೌಕರ್ಯಗಳಲ್ಲದೆ ರಜಾ ನಗದೀಕರಣ ಸೌಲಭ್ಯ, ಹಬ್ಬದ ಮುಂಗಡ ಹಾಗೂ ರಾಜ್ಯ ಸರ್ಕಾರಿ ಅಧಿಕಾರಿಗಳಿಗೆ ಲಭ್ಯವಿರುವ ವಾಹನ, ದೂರವಾಣಿ ಮತ್ತು ಲಭ್ಯವಿರುವ ಕಡೆ ವಸತಿ ಗೃಹವನ್ನು ನೀಡಲಾಗುತಿದೆ.

ರಾಜ್ಯ ಸರ್ಕಾರಿ ನೌಕರರಿಗೆ ಲಭ್ಯವಾಗುವ ಎಲ್ಲಾ ಸೌಲಭ್ಯಗಳಾದ ಮುಂಗಡಗಳು, ವೈದ್ಯೋಪಚಾರಗಳು, ರಜಾ ನಗದೀಕರಣ ಇತ್ಯಾದಿ ಸೌಲಭ್ಯಗಳು ಐ.ಎ.ಎಸ್. ಅಧಿಕಾರಿಗಳಿಗೆ ಲಭ್ಯ ಇವೆ.

ಮಹಾದಾಯಿ ಜಲವಿದ್ಯುತ್ ಹಾಗೂ ನೀರಾವರಿ ಯೋಜನೆಯ ಬಗ್ಗೆ

370. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ):– ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾದಾಯಿ ಯೋಜನೆಯ ಪ್ರಾರಂಭಕ್ಕಾಗಿ ಸರ್ಕಾದವರು ಕೈಗೊಂಡಿರುವ ಕ್ರಮವೇನು?

ಆ) ಈ ಯೋಜನೆಯಿಂದ ಉತ್ಪಾದನೆಯಾಗಬಹುದಾದ ವಿದ್ಯುತ್‌ದ ಪ್ರಮಾಣವೆಷ್ಟು?

ಇ) ಮಹಾದಾಯಿ ಯೋಜನೆಯಿಂದ ಮಲಪ್ರಭಾ ಅಣೆಕಟ್ಟೆಗೆ ಎಷ್ಟು ಟಿ.ಎಂ.ಸಿ. ನೀರು ಬಿಡುಗಡೆ ಮಾಡಲಾಗುತ್ತದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):–

ಅ) ಮಹಾದಾಯಿ ಜಲವಿದ್ಯುತ್ ಹಾಗೂ ನೀರಾವರಿ ಯೋಜನೆಗೆ ಸರ್ಕಾರದ ಮಂಜೂರಾತಿಯನ್ನು 1988 ರಲ್ಲಿ ನೀಡಲಾಗಿದೆ.

ಆ) ಈ ಯೋಜನೆಯಿಂದ ವಾರ್ಷಿಕ 828 ಮಿಲಿಯನ್ ಯೂನಿಟ್ಸ್ ವಿದ್ಯುತ್ ಉತ್ಪಾದನೆಯಾಗುವುದು.

ಇ) ಮಹಾದಾಯಿ ಯೋಜನೆಯಿಂದ ಮಲಪ್ರಭಾ ಅಣೆಕಟ್ಟೆಗೆ 9 ಟಿ.ಎಂ.ಸಿ. ನೀರನ್ನು ಹಾಯಿಸಲಾಗುವುದು.

ಹುಕ್ಕೇರಿ ತಾಲ್ಲೂಕಿನಲ್ಲಿ ಕುರ್ಣಿ ಹಾಗೂ ಕೋಚರಿ ಏತ ನೀರಾವರಿ ಬಗ್ಗೆ

369. ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ):– ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನ ಕುರಣಿ ಹಾಗೂ ಕೋಚೇರಿ ಏತ ನೀರಾವರಿಗಳನ್ನು ಪೂರ್ಣ ಮಾಡಲು ವಿಳಂಬ ಆಗುತ್ತಿರುವುದಕ್ಕೆ ಕಾರಣವೇನು?

ಆ) ಇದಕ್ಕಾಗಿ ವಿಶೇಷ ಹಣಕಾಸಿನ ವ್ಯವಸ್ಥೆ ಮಾಡಲು ಸರಕಾರದವರು ಕೈಗೊಂಡ ಕ್ರಮವೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):–

ಅ) ಕುರ್ಣಿ ಏತ ನೀರಾವರಿ ಯೋಜನೆಯ 2 ನೇ ಹಾಗೂ 3ನೇ ಹಂತಕ್ಕೆ ತಾಂತ್ರಿಕ ಸಮಿತಿಯಿಂದ ಮಂಜೂರಾತಿಯು ಇನ್ನೂ ದೊರೆಯಬೇಕಾಗಿದೆ. ಕೋಚೇರಿ ಏತ ನೀರಾವರಿ ಯೋಜನೆಯ ಅಂದಾಜು ಇನ್ನೂ ಮರಿಜೂರು ಆಗಬೇಕಾಗಿದೆ.

ಆ) ಎರಡೂ ಯೋಜನೆಗಳಿಗೆ ಮಂಜೂರಾತಿ ದೊರೆತ ನಂತರ ಘಟಪ್ರಭಾ ಯೋಜನೆಗೆ ನೀಡುವ ಹಣದಿಂದ ಇವುಗಳಿಗೆ ಹಣ ಒದಗಿಸಲಾಗುವುದು.

ರಾಜ್ಯದಲ್ಲಿ ಕೊಳಚೆ ಪ್ರದೇಶಗಳನ್ನು ಗುರುತಿಸುವಿಕೆ ಬಗ್ಗೆ

363. ಶ್ರೀ ಎಂ. ವಿ. ಮೆಂಕಟಪ್ಪ (ಮುಳಬಾಗಿಲು):– ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?